**International Journal of Law, Education, Social and Sports Studies (IJLESS)**
**Volume: 12, Issue S2, 2025 (Special issue-2)**
**ISSN: 2455-0418 (Print), 2394-9724 (online)**

# ಬಿ.ಇಡಿ ಕಾಲೇಜುಗಳ ಪ್ರಶಿಕ್ಷಕರ ಕೆಲಸದ ಸಂಸ್ಕೃತಿಗೆ ಸಂಬಂಧಿಸಿದಂತೆ ಪ್ರಾಂಶುಪಾಲರ ನಾಯಕತ್ವ ನಡವಳಿಕೆ ಕುರಿತು ಒಂದು ಅಧ್ಯಯನ

**ಮಹದೇವಸ್ವಾಮಿ[1], ಡಾ. ಎನ್. ಲಕ್ಷ್ಮಿ[2]**
[1]ಸಂಶೋಧಕರು, ಶಿಕ್ಷಣ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು-06
ಹಾಗೂ
[2]ಶಿಕ್ಷಣ ಪ್ರಾಧ್ಯಾಪಕರು ಮತ್ತು ಡೀನ್ (ಅಕಾಡೆಮಿಕ್)
ಶಿಕ್ಷಣ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮುಕ್ತ ಗಂಗೋತ್ರಿ, ಮೈಸೂರು-06

DOI: 10.33329/ijless.12.S2.635




**Abstract**

**ಸಾರಾಂಶ**

ಪ್ರಸ್ತುತ ಸಂಶೋಧನೆಯು ಪ್ರಾಂಶುಪಾಲರ ನಾಯಕತ್ವ ನಡವಳಿಕೆಯು ಮತ್ತು ಕೆಲಸದ ಸಂಸ್ಕೃತಿಯ ನಡುವಿನ ಸಹಸಂಬಂಬಧವನ್ನು ಪರಿಶೋಧಿಸುವುದಾಗಿದೆ. ಪ್ರಸ್ತುತ ಅಧ್ಯಯನವು ಬಿ.ಇಡಿ. ಕಾಲೇಜು ಪ್ರಾಂಶುಪಾಲರ ನಾಯಕತ್ವ ನಡವಳಿಕೆಯು ಕೆಲಸದ ಸಂಸ್ಕೃತಿಯೊಂದಿಗೆ ಇರುವ ಸಂಬಂಧವನ್ನು ಅಧ್ಯಯನ ಮಾಡುವುದು ಮತ್ತು ಬಿ.ಇಡಿ. ಕಾಲೇಜುಗಳಲ್ಲಿ ಪ್ರಾಂಶುಪಾಲರ ನಾಯಕತ್ವ ನಡವಳಿಕೆ ಕೆಲಸದ ಸಂಸ್ಕೃತಿಯ ಮೇಲೆ ಬೀರುವ ಪರಿಣಾಮದ ಮಟ್ಟವನ್ನು ನಿರ್ಧರಿಸುವುದು ಉದ್ದೇಶವಾಗಿದೆ. ಪ್ರಸ್ತುತ ಸಂಶೋಧನೆಗೆ ಕಾಲೇಜು ಶಿಕ್ಷಣ ಇಲಾಖಾ ಅಡಿಯಲ್ಲಿ ಬರುವ ಬೆಂಗಳೂರು ಕಾಲೇಜು ಶಿಕ್ಷಣ ಪ್ರಾದೇಶಿಕ ವಿಭಾಗದ ಅಡಿ ಬರುವ ಬಿ.ಇಡಿ. ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಶಿಕ್ಷಕರನ್ನು ನಮೂನೆಯಾಗಿ ಪರಿಗಣಿಸಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಬೆಂಗಳೂರು ಕಾಲೇಜಿನ ಶಿಕ್ಷಣ ಇಲಾಖೆಯ 1,336 ಬಿ.ಇಡಿ. ಪ್ರಶಿಕ್ಷಕರನ್ನು ಒಟ್ಟು ಜನಸಂಖ್ಯೆಯಾಗಿ ಪರಿಗಣಿಸಲಾಗಿದೆ. ಮಾದರಿ ಆಯ್ಕೆಗಾಗಿ, ವರ್ಗೀಕೃತ ಯಾದೃಚ್ಛಿಕ ಮಾದರಿ ತಂತ್ರವನ್ನು ಆಯ್ಕೆ ಮಾಡಿಕೊಂಡು 298 ಪ್ರಶಿಕ್ಷಕರನ್ನು ಆಯ್ಕೆ ಮಾಡಲಾಗಿದೆ. ಸಂಶೋಧಕರೇ ಅಭಿವೃದ್ಧಿಪಡಿಸಿದ ಪ್ರಾಂಶುಪಾಲರ ನಾಯಕತ್ವ ನಡವಳಿಕಾ ಮಾಪನವನ್ನು ಪ್ರಾಂಶುಪಾಲರ ನಾಯಕತ್ವದ ನಡವಳಿಕೆಯನ್ನು ಪ್ರಶಿಕ್ಷಕರ ಮೂಲಕ ತಿಳಿಯುವುದು ಹಾಗೂ ಕೆಲಸದ ಸಂಸ್ಕೃತಿ ಮಾಪನವನ್ನು ಪ್ರಶಿಕ್ಷಕರ ಮೂಲಕ ಬಿ.ಇಡಿ ಕಾಲೇಜು ಸಂಸ್ಥೆಯ ಕೆಲಸದ ಸಂಸ್ಕೃತಿಯನ್ನು ಕಂಡುಹಿಡಿಯಲು ಬಳಸಲಾಗಿದೆ. ಎರಡು ಮಾಪನಗಳ ವಿಶ್ವಾಸನೀಯತೆ ಹಾಗೂ ಸಿಂಧುತ್ವವನ್ನು ಹೊಂದಿದೆ. ದತ್ತಾಂಶ ವಿಶ್ಲೇಷಣೆಗೆ ಸಂಖ್ಯಾಶಾಸ್ತ್ರ ವಿಧಗಳಾದ ಸಹಸಂಬಂಧದ ಗುಣಾಂಕ ಹಾಗೂ ಏಕಮುಖ ಪ್ರಸರಣಾ ವಿಶ್ಲೇಷಣೆ ಪರೀಕ್ಷೆಗಳನ್ನು ಬಳಸಲಾಗಿದ್ದು ಅವುಗಳ ಗಣನೀಯ ವ್ಯತ್ಯಾಸವನ್ನು ತಿಳಿಯಲು 0.05 ಹಾಗೂ 0.01 ಮಹತ್ವಪೂರ್ಣತೆಯ ಮಟ್ಟದಲ್ಲಿ ನೋಡಲಾಗಿದೆ. ಬಿ.ಇಡಿ. ಕಾಲೇಜಿನ ಪ್ರಶಿಕ್ಷಕರ ಕೆಲಸ ಸಂಸ್ಕೃತಿಯನ್ನು ರೂಪಿಸುವಲ್ಲಿ ಪ್ರಾಂಶುಪಾಲರ ನಾಯಕತ್ವ ನಡವಳಿಕೆಯು ಮಹತ್ವಪೂರ್ಣವಾದ ಪಾತ್ರವಹಿಸುತ್ತದೆ ಎಂಬುದನ್ನು ಸಂಶೋಧನೆಯು ನಿರ್ಣಯಿಸಿದೆ. ಸಕಾರಾತ್ಮಕ ಮತ್ತು ಪರಿಣಾಮಕಾರಿ ನಾಯಕತ್ವದ ದೃಷ್ಟಿಕೋನವು ಸಂಪೂರ್ಣ ಸಂಸ್ಥೆಯ ವಾತಾವರಣವನ್ನು ಮಹತ್ತರವಾಗಿ ಸುಧಾರಿಸಿ, ಪ್ರಶಿಕ್ಷಕರಿಗೆ ಉತ್ತಮ ವೃತ್ತಿಪರ ಅನುಭವಗಳನ್ನು ಉತ್ತೇಜಿಸುತ್ತದೆ.

ಕೀಲಿಪದಗಳು: ನಾಯಕತ್ವ ನಡವಳಿಕೆ, ಪ್ರಾಂಶುಪಾಲರ ನಾಯಕತ್ವ ನಡವಳಿಕೆ, ಕೆಲಸದ ಸಂಸ್ಕೃತಿ, ಪ್ರಶಿಕ್ಷಕರು.

## 1.ಹಿನ್ನೆಲೆ

ವೃತ್ತಿಪರ ಶಿಕ್ಷಣವು ವಿದ್ಯಾರ್ಥಿಗಳಿಗೆ ಸೃಜನಶೀಲ ಚಿಂತನೆಯನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ. ಅದಕ್ಕೆ ತಕ್ಕಂತೆ ವರ್ತಿಸುವ ಮನೋಭಾವ; ನಿರಂತರ ಸುಧಾರಣೆಗೆ ಒಂದು ವಿಧಾನ; ತಮ್ಮ ವೃತ್ತಿಪರ ಬದ್ಧತೆಯನ್ನು ಸಮರ್ಥಿಸಲು ನೈತಿಕ ಮೌಲ್ಯಗಳು; ಮತ್ತು ವೃತ್ತಿಪರ

ಗುರಿಗಳನ್ನು ನಿರ್ಧರಿಸುವ ಸಾಮರ್ಥ್ಯ. ಅಧ್ಯಾಪಕರಿಂದ ಅಪೇಕ್ಷಿತ ಫಲಿತಾಂಶದ ಪೂರ್ವಾಪೇಕ್ಷಿತವೆಂದರೆ ಈ ಕಾಲೇಜುಗಳಲ್ಲಿ ಉತ್ತಮವಾದ ವಾತಾವರಣ. ಉತ್ತಮ ಗುಣಮಟ್ಟದ ವೃತ್ತಿಪರರನ್ನು ರೂಪಿಸುವ ಪ್ರಮುಖ ಜವಾಬ್ದಾರಿಯನ್ನು ವೃತ್ತಿಪರ ಕಾಲೇಜುಗಳು ಹೊಂದಿವೆ. ಈ ವೃತ್ತಿಪರರು ಭವಿಷ್ಯದಲ್ಲಿ ರಾಷ್ಟ್ರದ ಜವಾಬ್ದಾರಿಯನ್ನು ಹೊರಬೇಕು. ಗುಣಮಟ್ಟದ ವೃತ್ತಿಪರರ ಇಳುವರಿಯು ಈ ಉದ್ಯೋಗಿಗಳ ಮೇಲೆ ಹೆಚ್ಚಾಗಿ ಅವಲಂಬಿತವಾಗಿರುವುದರಿಂದ ನೌಕರರು (ಶಿಕ್ಷಕರು) ಈ ಕಾಲೇಜುಗಳ ವಾತಾವರಣದಿಂದ ತೃಪ್ತರಾದಾಗ ಮಾತ್ರ ಅಂತಹ ಗುರಿಗಳನ್ನು ಸಾಧಿಸಬಹುದು. ಪ್ರಸ್ತುತ ಸನ್ನಿವೇಶದಲ್ಲಿ, ವೃತ್ತಿಪರ ಕಾಲೇಜುಗಳು ಕೆಲಸದ ಸಂಸ್ಕೃತಿಯನ್ನು ಅಧ್ಯಯನ ಮಾಡುವ ಅವಶ್ಯಕತೆಯಿದೆ ಎಂದು ಸಂಶೋಧಕರು ಭಾವಿಸುತ್ತಾರೆ. ಸಂಶೋಧನೆಯು ಬಿ.ಇಡಿ. ಕಾಲೇಜುಗಳ ಕೆಲಸದ ಸಂಸ್ಕೃತಿಯನ್ನು ಪ್ರಶಿಕ್ಷಕರ ದೃಷ್ಟಿಕೋನದಿಂದ ಅಧ್ಯಯನ ಮಾಡಬೇಕಾಗಿದೆ. ಹಾಗೂ ಅವುಗಳು ಪ್ರಾಂಶುಪಾಲರ ನಾಯಕತ್ವದ ನಡವಳಿಕೆಯೊಂದಿಗೆ ಹೊಂದಿರುವ ಸಂಬಂಧ ತಿಳಿಯುವ ಸಲುವಾಗಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಪ್ರಾಂಶುಪಾಲರು ಮತ್ತು ಪ್ರಶಿಕ್ಷಕರು ಶಿಕ್ಷಣ ಸಂಸ್ಥೆಯಲ್ಲಿ ಉತ್ತಮ ಪ್ರಶಿಕ್ಷಣಾರ್ಥಿಗಳನ್ನು ರೂಪಿಸುತ್ತಾರೆ ಹಾಗೂ ಇವರು ಶೈಕ್ಷಣಿಕ ಆಡಳಿತದ ಕೇಂದ್ರವಾಗಿದ್ದು, ಬಹುವಿಧದ ಕರ್ತವ್ಯಗಳನ್ನು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುತ್ತಾರೆ. ಕಾಲೇಜುಗಳಲ್ಲಿ ನಡೆಯುವ ಎಲ್ಲದಕ್ಕೂ ಅವರು ಜವಾಬ್ದಾರನಾಗಿರುತ್ತಾರೆ. ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಮತ್ತು ಸಾರ್ವಜನಿಕರೊಂದಿಗೆ ವ್ಯವಹರಿಸಿ ಸಂಸ್ಥೆಯ ಗುರಿ ಮತ್ತು ಉದ್ದೇಶಗಳನ್ನು ಸಾಧಿಸಲು ಹಾಗೂ ಸಂಸ್ಥೆಯನ್ನು ಸುಗಮವಾಗಿ ನಡೆಸಲು ಯೋಜಿಸುತ್ತಾರೆ, ಸಂಘಟಿಸುತ್ತಾರೆ ಮತ್ತು ಮೇಲ್ವಿಚಾರಣೆ ಮಾಡುತ್ತಾರೆ. ಸಂಸ್ಥೆಯನ್ನು ಸರಿಯಾಗಿ ನಡೆಸಲು ಪ್ರಾಂಶುಪಾಲರು ಪರಿಣಾಮಕಾರಿ ನಾಯಕತ್ವದ ಗುಣವನ್ನು ಹೊಂದಿರಬೇಕು. ನಾಯಕತ್ವವು ಒಂದು ಗುಂಪು ಅಥವಾ ಅನುಯಾಯಿಗಳ ಗುರಿಗಳ ಒಂದು ದೃಷ್ಟಿಯ ಸಾಧನೆಯ ಕಡೆಗೆ ಪ್ರಭಾವ ಬೀರುವ ಸಾಮರ್ಥ್ಯವಾಗಿದೆ. ಉದ್ದೇಶಗಳು ಅಥವಾ ಗುರಿಗಳ ಕಡೆಗೆ ಸಂತೋಷದಿಂದ ಮತ್ತು ಉತ್ಸಾಹದಿಂದ ಕೆಲಸ ಮಾಡಲು ಇತರರನ್ನು ಪ್ರೋತ್ಸಾಹಿಸುವ ಮತ್ತು ಸಹಾಯ ಮಾಡುವ ಪ್ರಕ್ರಿಯೆಯೊಂದಿಗಿನ ಒಂದು ಸಂಬಂಧವಾಗಿದೆ.

ಬಿ.ಇಡಿ. ಕಾಲೇಜುಗಳಲ್ಲಿ ಪ್ರಾಂಶುಪಾಲರ ನಾಯಕತ್ವದ ಶೈಲಿ ಮತ್ತು ಕೆಲಸದ ಸಂಸ್ಕೃತಿಯು ಪರಸ್ಪರ ಸಂಬಂಧ ಹೊಂದಿವೆ. ಪ್ರಭಾವಶಾಲಿ ಮತ್ತು ದೃಢ ನಾಯಕತ್ವವು ಕಾಲೇಜಿನಲ್ಲಿ ಶಿಸ್ತುಬದ್ಧ ನಾಯಕ, ಪಾರದರ್ಶಕ ಹಾಗೂ ಪ್ರೇರಣಾದಾಯಕ ಕೆಲಸದ ಸಂಸ್ಕೃತಿಯನ್ನು ರೂಪಿಸುತ್ತದೆ. ಸೈನ್ (1992)ರವರ ಪ್ರಕಾರ, "ನಾಯಕತ್ವವು ಕೆಲಸದ ಸಂಸ್ಕೃತಿಯನ್ನು ನಿರ್ಧರಿಸುವ ಪ್ರಮುಖ ಅಂಶವಾಗಿದ್ದು, ಅದು ಸಂಸ್ಥೆಯ ನೈತಿಕತೆ ಮತ್ತು ಕಾರ್ಯಪದ್ಧತಿಗಳನ್ನು ಪ್ರಭಾವಿಸುತ್ತದೆ." ಪ್ರಾಂಶುಪಾಲರು ಪ್ರೇರೇಪಕ, ಸಹಾನುಭೂತಿಶೀಲ ಮತ್ತು ಜವಾಬ್ದಾರಿಯುತ ನಾಯಕರಾಗಿದ್ದರೆ, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉತ್ಸಾಹದಿಂದ ಹಾಗೂ ಕರ್ತವ್ಯ ನಿಷ್ಠೆಯಿಂದ ಕೆಲಸ ಮಾಡುತ್ತಾರೆ. ಉತ್ತಮ ಕೆಲಸದ ಸಂಸ್ಕೃತಿ ಹೊಂದಿರುವ ಕಾಲೇಜಿನಲ್ಲಿ ಸಹಕಾರ, ಸರಳ ಸಂವಹನ ಮತ್ತು ಶೈಕ್ಷಣಿಕ ಗುಣಮಟ್ಟದ ಬೆಂಬಲ ಹೆಚ್ಚಾಗುತ್ತದೆ. ಕಠಿಣ ಅಥವಾ ಪ್ರಭಾವರಹಿತ ನಾಯಕತ್ವವು ಸಂಸ್ಥೆಯಲ್ಲಿ ಅಶಿಸ್ತು, ತೃಪ್ತಿಯ ಕೊರತೆ ಮತ್ತು ದುರ್ಬಲ ಶೈಕ್ಷಣಿಕ ಕಾರ್ಯಕ್ಷಮತೆಯನ್ನು ಉಂಟುಮಾಡುತ್ತದೆ. ಆದ್ದರಿಂದ, ಬಿ.ಇಡಿ. ಕಾಲೇಜುಗಳ ಪ್ರಾಂಶುಪಾಲರು ಉತ್ತಮ ನಾಯಕತ್ವವನ್ನು ತೋರಿದಾಗ ಅದು ಕಾರ್ಯಪದ್ಧತಿ, ಪ್ರೋತ್ಸಾಹ ಮತ್ತು ತಂಡಾಭಿಮಾನವನ್ನು ಉತ್ತೇಜಿಸುವ ಕೆಲಸದ ಸಂಸ್ಕೃತಿಯನ್ನು ಬೆಳೆಸಲು ಸಹಕಾರಿಯಾಗುತ್ತದೆ.

ಪ್ರಸ್ತುತ ಸಂಶೋಧನೆಯು ಪ್ರಾಂಶುಪಾಲರ ನಾಯಕತ್ವ ನಡವಳಿಕೆಯು ಮತ್ತು ಕೆಲಸದ ಸಂಸ್ಕೃತಿಯ ನಡುವಿನ ಸಹಸಂಬಂಬಧವನ್ನು ಪರಿಶೋಧಿಸುತ್ತದೆ. ಈ ಸಂದರ್ಭದಲ್ಲಿ, ಪ್ರಶಿಕ್ಷಕರು ಕೆಲಸದ ಸಂಸ್ಕೃತಿ ರೂಪಿಸುವಲ್ಲಿ ಪ್ರಾಂಶುಪಾಲರು ನಿರ್ಣಾಯಕ ಪಾತ್ರವನ್ನು ವಹಿಸುತ್ತಾರೆ.

ನಾಯಕತ್ವದ ನಡವಳಿಕೆಯು ತಮ್ಮ ಶಿಕ್ಷಣ ಸಂಸ್ಥೆಗಳಿಗೆ ಮಾರ್ಗದರ್ಶನ ನೀಡುವ ಮತ್ತು ಪ್ರಭಾವ ಬೀರುವಲ್ಲಿ ಪ್ರಾಂಶುಪಾಲರು ಬಳಸುವ ಕ್ರಮಗಳು, ನಿರ್ಧಾರಗಳು ಮತ್ತು ಕಾರ್ಯತಂತ್ರಗಳನ್ನು ಸೂಚಿಸುತ್ತದೆ. ಕೆಲಸದ ಸಂಸ್ಕೃತಿಯು ಆ ಸಂಸ್ಥೆಯೊಳಗಿನ ವ್ಯಕ್ತಿಗಳ ಸಾಮೂಹಿಕ ನಂಬಿಕೆಗಳು, ವರ್ತನೆಗಳು ಮತ್ತು ನಡವಳಿಕೆಗಳನ್ನು ಒಳಗೊಂಡಿರುತ್ತದೆ. ಈ ಸಂಶೋಧನೆಯು ಪ್ರಾಂಶುಪಾಲರ ನಾಯಕತ್ವದ ನಡವಳಿಕೆಯು ಕೆಲಸದ ಸಂಸ್ಕೃತಿಯನ್ನು ನಿರ್ದಿಷ್ಟವಾಗಿ ಬಿ.ಇಡಿ. ಶಿಕ್ಷಣದಲ್ಲಿ ಹೇಗೆ ಪ್ರಭಾವಿಸುತ್ತದೆ ಎಂಬುದನ್ನು ತನಿಖೆ ಮಾಡಲು ಪ್ರಯತ್ನಿಸುತ್ತದೆ.

**2.ಅಧ್ಯಯನದ ಮಹತ್ವ**

ಯಾವುದೇ ಸಂಶೋಧನಾ ಅಧ್ಯಯನದಲ್ಲಿ 'ಸಂಬಂಧಿತ ಸಾಹಿತ್ಯ ಅವಲೋಕನ' ಒಂದು ಮಹತ್ವದ ಅಂಗವಾಗಿದೆ. ಹಿಂದಿನ ಜ್ಞಾನದ ಆಧಾರದ ಮೇಲಿಂದ ಸಂಶೋಧನಾ ವಿಷಯಗಳನ್ನು ಅಭಿವ್ಯಕ್ತಿಗೊಳಿಸುವದು ಅವಶ್ಯಕವಾಗಿರುತ್ತದೆ. ಸಂಶೋಧಕರು ಕೈಗೊಂಡ ಹಿಂದಿನ ಅಧ್ಯಯನಗಳ ಮೂಲಕ ಸೂಕ್ತವಾದ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲು ಸಹಾಯಕವಾಗಿದೆ.

ಶೈಕ್ಷಣಿಕ ನಾಯಕತ್ವ ಮತ್ತು ಕೆಲಸದ ಸಂಸ್ಕೃತಿ ಕುರಿತಾಗಿ ಹಲವು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಅಧ್ಯಯನಗಳು ನಡೆದಿವೆ. ಈ ಅಧ್ಯಯನಗಳಲ್ಲಿ ಮುಖ್ಯವಾಗಿ ಶಾಲಾ ಮುಖ್ಯೋಪಾಧ್ಯಾಯರ ನಾಯಕತ್ವ ಶೈಲಿಯು ಶಿಕ್ಷಕರ ಕಾರ್ಯಕ್ಷಮತೆ, ಕೆಲಸದ ತೃಪ್ತಿ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ವಿಶ್ಲೇಷಿಸಲಾಗಿದೆ. Veletic ಮತ್ತು ಸಹಚರರು (2023), Al-Safran (2002), Khaola & Oni (2020), Nageswari & Subathra (2020), Rehman (2019) ಅವರು ತಮ್ಮ ಅಧ್ಯಯನಗಳಲ್ಲಿ ಶೈಕ್ಷಣಿಕ ನಾಯಕತ್ವವು ಶಿಕ್ಷಕರ ನಾವೀನ್ಯತೆಯ ಕೆಲಸದ ವರ್ತನೆ ಮತ್ತು ತೃಪ್ತಿಯ ಮೇಲೆ ಪರಿಣಾಮ ಬೀರುತ್ತದೆ ಎಂದು ಹೇಳಿದ್ದಾರೆ. ಅದರೊಂದಿಗೆ, ಶಾಲಾ ಸಂಸ್ಕೃತಿಯು ಶಾಲಾ ಕಾರ್ಯಕ್ಷಮತೆ ಮತ್ತು ಶಿಕ್ಷಕರ ನಡವಳಿಕೆಯ ಮೇಲೆ ಹೇಗೆ ಪರಿಣಾಮ ಬೀರುತ್ತದೆ

ಎಂಬುದನ್ನೂ ಹಲವು ಅಧ್ಯಯನಗಳು ಪ್ರತಿಪಾದಿಸಿವೆ. Mohamed (2022), Fu et al (2022), Kashif et al (2021), Lutfah et al (2019) ಅವರು ಶಾಲಾ ಸಂಸ್ಕೃತಿಯು ಶಿಕ್ಷಕರ ತೃಪ್ತಿ ಮತ್ತು ಕಾರ್ಯಕ್ಷಮತಿಗೆ ಸಹಕಾರಿ ಎನ್ನುತ್ತಾರೆ. Kalman & Balkar (2018), Ghanney et al (2017) ಅವರ ಅಧ್ಯಯನಗಳು ಶಾಲಾ ಸಂಸ್ಕೃತಿಯು ಶಿಕ್ಷಕರ ಮನೋಭಾವದ ಮೇಲೆ ಪರಿಣಾಮ ಬೀರುತ್ತದೆ ಎಂದು ದಾಖಲಿಸಿವೆ.

ಮುಂಬರುವ ಅಧ್ಯಯನಗಳಿಗೆ ಗಮನಾರ್ಹವಾದ ಕೆಲವು ಸಂಶೋಧನಾ ಅಂತರಗಳು ಇವೆ. ಮೊದಲನೆಯದಾಗಿ, ಹೆಚ್ಚಿನ ಅಧ್ಯಯನಗಳು ಪಶ್ಚಿಮ ರಾಷ್ಟ್ರಗಳಲ್ಲಿ ಅಥವಾ ಇತರ ಅಂತರಾಷ್ಟ್ರೀಯ ಮಟ್ಟದಲ್ಲಿ ನಡೆದಿದ್ದು, ಭಾರತೀಯ ವಿಶೇಷವಾಗಿ ಕರ್ನಾಟಕದ ಸರ್ಕಾರಿ ಮತ್ತು ಖಾಸಗಿ ಶಾಲೆಗಳ ಶೈಕ್ಷಣಿಕ ನಾಯಕತ್ವ, ಮತ್ತು ಕೆಲಸದ ಸಂಸ್ಕೃತಿಯ ಸನ್ನಿವೇಶವನ್ನು ಆಳವಾಗಿ ಅಧ್ಯಯನ ಮಾಡಿರುವ ಉಲ್ಲೇಖಗಳು ಕಡಿಮೆ ಇವೆ.

ಇನ್ನೊಂದು ಪ್ರಮುಖ ಅಂತರವೆಂದರೆ, ಹೆಚ್ಚಿನ ಅಧ್ಯಯನಗಳು ಶಾಲಾ ಮುಖ್ಯೋಪಾಧ್ಯಾಯರ ಶೈಲಿಯು ಶಿಕ್ಷಕರ ತೃಪ್ತಿ ಅಥವಾ ನಡವಳಿಕೆ ಮೇಲಿನ ಪರಿಣಾಮವನ್ನು ಮಾತ್ರ ತಿಳಿಸಿದ್ದರೂ, ಅದರ ನೇರ ಪರಿಣಾಮ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಮೇಲಿರುವ ಸಂಬಂಧವನ್ನು ಬಹುಶಃ ಕೈಗೆತ್ತಿಕೊಂಡಿಲ್ಲ. ವಿದ್ಯಾರ್ಥಿಗಳ ಸಾಧನೆ ಮೇಲೆ ಶೈಕ್ಷಣಿಕ ನಾಯಕತ್ವ, ಶಾಲಾ ವಾತಾವರಣ ಮತ್ತು ಶಾಲಾ ಸಂಸ್ಕೃತಿಯ ಸಮೂಹ ಪರಿಣಾಮವನ್ನು ವಿಶ್ಲೇಷಿಸುವ ಅಗತ್ಯವಿದೆ.

ಬಿ.ಇಡಿ ಕಾಲೇಜಿನ ಕೆಲಸದ ಸಂಸ್ಕೃತಿಗೆ ಸಂಬಂಧಿಸಿದಂತೆ ಪ್ರಾಂಶುಪಾಲರ ನಾಯಕತ್ವದ ನಡವಳಿಕೆಯ ಕುರಿತು ಕೈಗೊಂಡಿರುವ ಅಧ್ಯಯನವು ಶಿಕ್ಷಣ ಕ್ಷೇತ್ರದ ವಿವಿಧ ಶಿಕ್ಷಣತಜ್ಞರಿಗೆ, ಕಾಲೇಜು ಮುಖ್ಯಸ್ಥರು ಹಾಗೂ ಶಿಕ್ಷಕರಿಗೆ ಮಹತ್ವದ ಪ್ರಾಮುಖ್ಯತೆಯನ್ನು ಹೊಂದಿದೆ. ಈ ಸಂಶೋಧನೆಯ ಮಹತ್ವವನ್ನು ಎತ್ತಿ ತೋರಿಸುವ ಕೆಲವು ಪ್ರಮುಖ ಅಂಶಗಳು ಇಲ್ಲಿವೆ:

ನಾಯಕತ್ವದ ನಡವಳಿಕೆ ಮತ್ತು ಕೆಲಸದ ಸಂಸ್ಕೃತಿಯ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳುವುದು ಪ್ರಶಿಕ್ಷಕರ ತಯಾರಿ ಕಾರ್ಯಕ್ರಮಗಳನ್ನು ಸುಧಾರಿಸಲು ಅವಶ್ಯಕವಾಗಿದೆ. ಸಕಾರಾತ್ಮಕ ನಾಯಕತ್ವವು ಪರಿಣಾಮಕಾರಿ ಬೋಧನಾ ಅಭ್ಯಾಸಗಳನ್ನು ಬೆಳೆಸುವ ಮತ್ತು ಪ್ರಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವ ವಾತಾವರಣದ ಸೃಷ್ಟಿಗೆ ಕೊಡುಗೆ ನೀಡುತ್ತದೆ.

ಸಂಶೋಧನೆಯು ಬಿ.ಇಡಿ ಶಿಕ್ಷಣದ ಪರಿಣಾಮಕಾರಿತ್ವದ ಮೇಲೆ ಪ್ರಭಾವ ಬೀರುವ ಸಾಮರ್ಥ್ಯವನ್ನು ಹೊಂದಿದೆ. ಶಿಕ್ಷಕ ಶಿಕ್ಷಕರು. ನಾಯಕತ್ವದ ನಡವಳಿಕೆಯು ಮತ್ತು ಕೆಲಸದ ಸಂಸ್ಕೃತಿಯ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ಗುರುತಿಸುವ ಮೂಲಕ, ಅಧ್ಯಯನವು ಪ್ರಶಿಕ್ಷಕರ ವೃತ್ತಿಪರ ಬೆಳವಣಿಗೆ ಮತ್ತು ಪರಿಣಾಮಕಾರಿತ್ವಕ್ಕೆ ಕೊಡುಗೆ ನೀಡುವ ಅಭ್ಯಾಸಗಳ ಒಳನೋಟಗಳನ್ನು ನೀಡುತ್ತದೆ.

**3.ಸಮಸ್ಯೆಯ ನಿರೂಪಣೆ**

"ಬಿ.ಇಡಿ. ಕಾಲೇಜುಗಳ ಪ್ರಶಿಕ್ಷಕರ ಕೆಲಸದ ಸಂಸ್ಕೃತಿಗೆ ಸಂಬಂಧಿಸಿದಂತೆ ಪ್ರಾಂಶುಪಾಲರ ನಾಯಕತ್ವ ನಡವಳಿಕೆ ಕುರಿತು ಒಂದು ಅಧ್ಯಯನ"

**4.ಅಧ್ಯಯನದ ಉದ್ದೇಶಗಳು**

ಪ್ರಸ್ತುತ ಅಧ್ಯಯನವು ಈ ಕೆಳಗಿನ ಉದ್ದೇಶಗಳನ್ನು ಒಳಗೊಂಡಿದೆ.

1. ಬಿ.ಇಡಿ. ಕಾಲೇಜು ಪ್ರಾಂಶುಪಾಲರ ನಾಯಕತ್ವ ನಡವಳಿಕೆಯು ಕೆಲಸದ ಸಂಸ್ಕೃತಿಯೊಂದಿಗೆ ಇರುವ ಸಂಬಂಧವನ್ನು ಅಧ್ಯಯನ ಮಾಡುವುದು.
2. ಬಿ.ಇಡಿ. ಕಾಲೇಜುಗಳಲ್ಲಿ ಪ್ರಾಂಶುಪಾಲರ ನಾಯಕತ್ವ ನಡವಳಿಕೆ ಕೆಲಸದ ಸಂಸ್ಕೃತಿಯ ಮೇಲೆ ಬೀರುವ ಪರಿಣಾಮದ ಮಟ್ಟವನ್ನು ನಿರ್ಧರಿಸುವುದು.

**5.ಅಧ್ಯಯನದ ಪ್ರಾಕಲ್ಪನೆಗಳು**

1. ಕಾಲೇಜು ಪ್ರಾಂಶುಪಾಲರ ನಾಯಕತ್ವ ನಡವಳಿಕೆಯೊಂದಿಗೆ ಕೆಲಸದ ಸಂಸ್ಕೃತಿಯ ನಡುವೆ ಯಾವುದೇ ಮಹತ್ವಪೂರ್ಣವಾದ ಸಂಬಂಧವಿಲ್ಲ.
2. ಬಿ.ಇಡಿ. ಸಂಸ್ಥೆಗಳ ಕಾಲೇಜು ಪ್ರಾಂಶುಪಾಲರ ನಾಯಕತ್ವ ನಡವಳಿಕೆಯ ವಿಭಿನ್ನ ಪರಿಣಾಮಕಾರಿತ್ವ ಮಟ್ಟಗಳಡಿ ಕಾರ್ಯನಿರ್ವಹಿಸುತ್ತಿರುವ ಬಿ.ಇಡಿ. ಪ್ರಶಿಕ್ಷಕರ ಕೆಲಸದ ಸಂಸ್ಕೃತಿಯಲ್ಲಿ ಯಾವುದೇ ಮಹತ್ವಪೂರ್ಣವಾದ ವ್ಯತ್ಯಾಸವಿಲ್ಲ.

**6.ಸಂಶೋಧನಾ ವಿಧಾನ**

**6.1ಸಂಶೋಧನಾ ವಿಧ**

ಪ್ರಸ್ತಾಪಿತ ಅಧ್ಯಯನವನ್ನು ವಿವರಣಾತ್ಮಕ ಸಮೀಕ್ಷಾ ವಿಧಾನದ ಮೂಲಕ ನಡೆಸಲಾಯಿತು.

**6.2ನಮೂನೆ ಮಾದರಿ ಮತ್ತು ಗಾತ್ರ**

ಪ್ರಸ್ತುತ ಸಂಶೋಧನೆಗೆ ಕಾಲೇಜು ಶಿಕ್ಷಣ ಇಲಾಖಾ ಅಡಿಯಲ್ಲಿ ಬರುವ ಬೆಂಗಳೂರು ಕಾಲೇಜು ಶಿಕ್ಷಣ ಪ್ರಾದೇಶಿಕ ವಿಭಾಗದ ಅಡಿ ಬರುವ ಬಿ.ಇಡಿ. ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಶಿಕ್ಷಕರನ್ನು ನಮೂನೆಯಾಗಿ ಪರಿಗಣಿಸಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಬೆಂಗಳೂರು ಕಾಲೇಜಿನ ಶಿಕ್ಷಣ ಇಲಾಖೆಯ **1,336** ಬಿ.ಇಡಿ. ಪ್ರಶಿಕ್ಷಕರನ್ನು ಒಟ್ಟು ಜನಸಂಖ್ಯೆಯಾಗಿ ಪರಿಗಣಿಸಲಾಗಿದೆ. ಮಾದರಿ ಆಯ್ಕೆಗಾಗಿ, ವರ್ಗೀಕೃತ ಯಾದೃಚ್ಛಿಕ ಮಾದರಿ (Stratified Random Sampling) ತಂತ್ರವನ್ನು ಆಯ್ಕೆ ಮಾಡಿಕೊಂಡು **298** ಪ್ರಶಿಕ್ಷಕರನ್ನು ಆಯ್ಕೆ ಮಾಡಲಾಗಿದೆ.

**6.3ಸಂಶೋಧನೆಯ ದತ್ತಾಂಶ ಸಂಗ್ರಹಣೆಗೆ ಬಳಸಿದ ಸಾಧನಗಳು**

| ಕ್ರ ಸಂ. | ಸಾಧನ | ಉದ್ದೇಶ | ಸಿದ್ಧಪಡಿಸಿದವರು | ವಿಶ್ವಾಸನೀಯತೆ | ಸಿಂಧುತ್ವ |
|---|---|---|---|---|---|
| **1.** | ಪ್ರಾಂಶುಪಾಲರ ನಾಯಕತ್ವ ನಡವಳಿಕಾ ಮಾಪನ | ಪ್ರಾಂಶುಪಾಲರ ನಾಯಕತ್ವದ ನಡವಳಿಕೆಯನ್ನು ಪ್ರಶಿಕ್ಷಕರ ಮೂಲಕ ತಿಳಿಯುವುದು. | ಸಂಶೋಧಕರು ಹಾಗೂ ಮಾರ್ಗದರ್ಶಕರು | **0.732** | ವಿಷಯ ಮಾನ್ಯತೆ ತಜ್ಞರ ಮೂಲಕ ನಿರ್ಧಾರ |
| **3.** | ಕೆಲಸದ ಸಂಸ್ಕೃತಿಯ ಮಾಪನ | ಪ್ರಶಿಕ್ಷಕರ ಮೂಲಕ ಬಿ.ಇಡಿ ಕಾಲೇಜು ಸಂಸ್ಥೆಯ ಕೆಲಸದ ಸಂಸ್ಕೃತಿಯನ್ನು ಕಂಡುಹಿಡಿಯುವುದು. | ಸಂಶೋಧಕರು ಹಾಗೂ ಮಾರ್ಗದರ್ಶಕರು | **0.792** | ವಿಷಯ ಮಾನ್ಯತೆ ತಜ್ಞರ ಮೂಲಕ ನಿರ್ಧಾರ |

**6.4ಮಾಹಿತಿ ಸಂಗ್ರಹಣೆ**

ಸಂಶೋಧನಾ ಉದ್ದೇಶಿತ ವಿಷಯವಾದ ಬಿ.ಇಡಿ ಕಾಲೇಜುಗಳ ಪ್ರಶಿಕ್ಷಕರ ಕೆಲಸದ ಸಂಸ್ಕೃತಿಗೆ ಸಂಬಂಧಿಸಿದಂತೆ ಪ್ರಾಂಶುಪಾಲರ ನಾಯಕತ್ವ ನಡವಳಿಕೆ ಕುರಿತು ಒಂದು ಅಧ್ಯಯನದ ಬಗ್ಗೆ ವಿಮರ್ಶಾತ್ಮಕ ಅಧ್ಯಯನ ಕೈಗೊಳ್ಳಲು ಕರ್ನಾಟಕದ ಕಾಲೇಜು ಶಿಕ್ಷಣ ಇಲಾಖೆಯಡಿ ಒಟ್ಟು ಆರು ಪ್ರಾದೇಶಿಕ ವಿಭಾಗಗಳಿದ್ದು, ಅವುಗಳೆಂದರೆ ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ, ಕಲಬುರುಗಿ ಹಾಗೂ ಬೆಂಗಳೂರುಗಳಾಗಿದ್ದು ಪ್ರಸ್ತುತ ಸಂಶೋಧನೆಗೆ ಕಾಲೇಜು ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಬೆಂಗಳೂರು ಕಾಲೇಜು ಶಿಕ್ಷಣ ಪ್ರಾದೇಶಿಕ ವಿಭಾಗದಡಿ ಬರುವ ಬಿ.ಇಡಿ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ **298** ಪ್ರಶಿಕ್ಷಕರಿಗೆ ಆಯ್ಕೆ ಮಾಡಿಕೊಂಡ ಸಾಧನಗಳನ್ನು ಬಳಸಿ ಮಾಹಿತಿಯನ್ನು ಪಡೆಯಲಾಯಿತು.

**6.5ದತ್ತಾಂಶ ವಿಶ್ಲೇಷಣೆಗೆ ಬಳಸಲಾದ ಸಾಂಖ್ಯಿಕ ವಿಧಾನ**

ಸಂಗ್ರಹಿಸಿದ ದತ್ತಾಂಶ ವಿಶ್ಲೇಷಣೆಗೆ ಈ ಕೆಳಗಿನ ಸಾಂಖ್ಯಿಕ ವಿಧಾನವನ್ನು ಬಳಸಲಾಯಿತು.

1. ಸಹಸಂಬಂಧ ಗುಣಾಂಕ ('r' ಮೌಲ್ಯ)
2. 'F' ಪರೀಕ್ಷಣೆ (ಮಹತ್ವದ ವ್ಯತ್ಯಾಸ)

**7.ದತ್ತಾಂಶಗಳ ವಿಶ್ಲೇಷಣೆ ಹಾಗೂ ಅರ್ಥೈಸುವಿಕೆ**

ಬಿ.ಇಡಿ. ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಶಿಕ್ಷಕರಿಗೆ ಸಂಬಂಧಿಸಿದಂತೆ ಕೆಲಸದ ಸಂಸ್ಕೃತಿ ಬಗ್ಗೆ ತಿಳಿಯುವುದು ಹಾಗೂ ಪ್ರಾಂಶುಪಾಲರ ನಾಯಕತ್ವ ನಡವಳಿಕೆಯ ನಡುವಿನ ಸಹಸಂಬಂಧವನ್ನು ತಿಳಿಯಲು ಕೆಲಸದ ಸಂಸ್ಕೃತಿಯ ಅಂಕಗಳನ್ನು ವಿಂಗಡಿಸಿಕೊಂಡು ದತ್ತಾಂಶ ವಿಶ್ಲೇಷಣೆಯನ್ನು ಮಾಡಲಾಗಿದೆ. ದತ್ತಾಂಶ ವಿಶ್ಲೇಷಣೆಗೆ ಸಂಖ್ಯಾಶಾಸ್ತ್ರ ವಿಧಗಳಾದ ಸಹಸಂಬಂಧದ ಗುಣಾಂಕ ('ಆರ್'–'r'), ಹಾಗೂ 'ಎಫ್' ('F') [ಏಕಮುಖ ಪ್ರಸರಣಾ (One-way ANOVA) ವಿಶ್ಲೇಷಣೆ] ಪರೀಕ್ಷೆಗಳನ್ನು ಬಳಸಲಾಗಿದ್ದು ಅವುಗಳ ಗಣನೀಯ ವ್ಯತ್ಯಾಸವನ್ನು ತಿಳಿಯಲು **0.05** ಹಾಗೂ **0.01** ಮಹತ್ವಪೂರ್ಣತೆಯ ಮಟ್ಟದಲ್ಲಿ ನೋಡಲಾಗಿದೆ.

ವಿಭಾಗ–1 : ಸಹಸಂಬಂಧದ ವಿಶ್ಲೇಷಣೆ ('r' ಮೌಲ್ಯ)

**ಶೂನ್ಯ ಪ್ರಾಕಲ್ಪನೆ–1**

ಕಾಲೇಜು ಪ್ರಾಂಶುಪಾಲರ ನಾಯಕತ್ವ ನಡವಳಿಕೆಯೊಂದಿಗೆ ಕೆಲಸದ ಸಂಸ್ಕೃತಿಯ ನಡುವೆ ಯಾವುದೇ ಮಹತ್ವಪೂರ್ಣವಾದ ಸಂಬಂಧವಿಲ್ಲ.

ಕೋಷ್ಟಕ–1: ಬಿ.ಇಡಿ. ಪ್ರಶಿಕ್ಷಕರ ಕೆಲಸದ ಸಂಸ್ಕೃತಿ ಮತ್ತು ನಾಯಕತ್ವದ ನಡವಳಿಕೆ ಅಂಕಗಳ ನಡುವಿನ ಪರಸ್ಪರ ಸಂಬಂಧವನ್ನು ತಿಳಿಯಲು ಬಳಸಲಾದ ಸಹಸಂಬಂಧ ('r') ಸಂಖ್ಯಾಶಾಸ್ತ್ರದ ಫಲಿತಾಂಶವನ್ನು ತೋರಿಸುವ ಕೋಷ್ಟಕ.

| ಚರಾಂಶಗಳು | ಸಂಖ್ಯೆ (N) | ಸ್ವಾತಂತ್ರ್ಯದ ಅಂಶಗಳು [df (N-2)] | 'r' ಮೌಲ್ಯ | ಮಹತ್ವದ ಮಟ್ಟ |
|---|---|---|---|---|
| ಕೆಲಸದ ಸಂಸ್ಕೃತಿ | 298 | 296 | 0.256 | ** |
| ನಾಯಕತ್ವ ನಡವಳಿಕೆ | | | | |

**Note:** 'r' value for N=298; df=296 at 0.01 level** is 0.148; 0.05 level* is 0.113; NS Not Significant

ಕೆಲಸದ ಸಂಸ್ಕೃತಿ ಮತ್ತು ಒಟ್ಟು ನಾಯಕತ್ವದ ನಡವಳಿಕೆಯ ನಡುವಿನ ಒಟ್ಟು ಸಹಸಂಬಂಧ 0.256 ಆಗಿದ್ದು, ಇದು 0.01 ಮಟ್ಟದಲ್ಲಿ ಅಂಕಗಣಿತದ ದೃಷ್ಟಿಯಿಂದ ಗಣನೀಯವಾಗಿದೆ. ಇದರಿಂದ ಸಾಧಾರಣ ಮಟ್ಟದ ಸಕಾರಾತ್ಮಕ ಸಂಬಂಧವಿದೆ ಎಂಬುದನ್ನು ಸೂಚಿಸುತ್ತದೆ. ಉತ್ತಮ ಹಾಗೂ ಬೆಂಬಲ ನೀಡುವ ಕೆಲಸದ ಸಂಸ್ಕೃತಿಯು ಬಿ.ಇಡಿ. ಪ್ರಶಿಕ್ಷಕರಲ್ಲಿ ಹೆಚ್ಚು ಪರಿಣಾಮಕಾರಿ ನಾಯಕತ್ವದ ನಡವಳಿಕೆಗೆ ಸಂಬಂಧಿಸಿದೆ ಎಂಬುದನ್ನು ಸೂಚಿಸುತ್ತದೆ. ಈ ವಿಶ್ಲೇಷಣೆಯು ಉತ್ತಮ ನಾಯಕತ್ವದ ಗುಣಲಕ್ಷಣಗಳನ್ನು (ವಿಶೇಷವಾಗಿ ದೃಷ್ಟಿಕೋನ, ನೈತಿಕತೆ ಮತ್ತು ಸಂವಹನ) ಬೆಳೆಸಲು ರಚನಾತ್ಮಕ ಕೆಲಸದ ಸಂಸ್ಕೃತಿಯನ್ನು ಬೆಳೆಸಬೇಕೆಂಬ ಅಗತ್ಯತೆಯನ್ನು ತಿಳಿಸುತ್ತದೆ.

ವಿಭಾಗ–2: ಭೇದಾತ್ಮಕ ವಿಶ್ಲೇಷಣೆ ('F' ಪರೀಕ್ಷಣೆ)

ಶೂನ್ಯ ಪ್ರಾಕಲ್ಪನೆ–2

ಬಿ.ಇಡಿ. ಸಂಸ್ಥೆಗಳ ಕಾಲೇಜು ಪ್ರಾಂಶುಪಾಲರ ನಾಯಕತ್ವ ನಡವಳಿಕೆಯ ವಿಭಿನ್ನ ಪರಿಣಾಮಕಾರಿತ್ವ ಮಟ್ಟಗಳಡಿ ಕಾರ್ಯನಿರ್ವಹಿಸುತ್ತಿರುವ ಬಿ.ಇಡಿ. ಪ್ರಶಿಕ್ಷಕರ ಕೆಲಸದ ಸಂಸ್ಕೃತಿಯಲ್ಲಿ ಯಾವುದೇ ಮಹತ್ವಪೂರ್ಣವಾದ ವ್ಯತ್ಯಾಸವಿಲ್ಲ.

ಕೋಷ್ಟಕ–2: ನಾಯಕತ್ವ ನಡವಳಿಕೆಯ (ವಿವಿಧ ಮಟ್ಟಗಳು) ಆಧಾರದ ಮೇಲೆ ಬಿ.ಇಡಿ. ಕಾಲೇಜು ಪ್ರಶಿಕ್ಷಕರ ಕೆಲಸದ ಸಂಸ್ಕೃತಿಯ ಅಂಕಗಳ ಕುರಿತು ಏಕಮುಖ ಪ್ರಸರಣಾ ವಿಶ್ಲೇಷಣೆಯ (One-way ANOVA) ಸಂಖ್ಯಾಶಾಸ್ತ್ರದ ಫಲಿತಾಂಶಗಳನ್ನು ವಿವರಿಸುತ್ತದೆ.

| ನಾಯಕತ್ವ ನಡವಳಿಕೆಯ ಮಟ್ಟ (Levels of Leadership Behaviour) | ಸಂಖ್ಯೆ (N) | ಸರಾಸರಿ(Mean) | ಮಾನಕ ವಿಚಲನೆ (Standard Deviation) |
|---|---|---|---|
| ಕಡಿಮೆ ಪರಿಣಾಮಕಾರಿ | 19 | 252.263 | 13.678 |
| ಮಧ್ಯಮ ಪರಿಣಾಮಕಾರಿ | 273 | 263.978 | 15.586 |
| ಹೆಚ್ಚು ಪರಿಣಾಮಕಾರಿ | 6 | 273.833 | 10.264 |
| ಒಟ್ಟು | 298 | 263.429 | 15.685 |

ಕೋಷ್ಟಕ–2ರಲ್ಲಿ, ಬಿ.ಇಡಿ. ಕಾಲೇಜು ಪ್ರಾಂಶುಪಾಲರ ನಾಯಕತ್ವದ ನಡವಳಿಕೆಯ (ವಿವಿಧ ಮಟ್ಟಗಳ) ಪ್ರಭಾವವನ್ನು ಆಧರಿಸಿ ವರ್ಗೀಕರಿಸಿದ ಬಿ.ಇಡಿ. ಪ್ರಶಿಕ್ಷಕರ ಕೆಲಸದ ಸಂಸ್ಕೃತಿಯ ಅಂಕಗಳನ್ನು ಕುರಿತಾದ ವಿವರಣಾತ್ಮಕ ಸಂಖ್ಯಾಶಾಸ್ತ್ರಗಳನ್ನು ಪ್ರಸ್ತುತಪಡಿಸಲಾಗಿದೆ. ಈ ಕೋಷ್ಟಕವು ಪ್ರಶಿಕ್ಷಕರುಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಿದೆ. ಅವುಗಳನ್ನು ತಿಳಿಯುವುದಾದರೆ,

- ಕಡಿಮೆ ಪರಿಣಾಮಕಾರಿ ನಾಯಕತ್ವದ ನಡವಳಿಕೆ: ಈ ಗುಂಪಿನಲ್ಲಿ 19 ಪ್ರಶಿಕ್ಷಕರಿದ್ದಾರೆ, ಅವರ ಸರಾಸರಿ ಅಂಕವು 252.263 ಮತ್ತು ಮಾನಕ ವಿಚಲನೆಯು 13.678 ಎಂದು ಸೂಚಿಸುತ್ತದೆ. ಕಡಿಮೆ ಪರಿಣಾಮಕಾರಿ ನಾಯಕತ್ವದ ನಡವಳಿಕೆಯ ಮಾರ್ಗದರ್ಶಿಯಲ್ಲಿ ಕಾರ್ಯನಿರ್ವಹಿಸುವ ಸಂಸ್ಥೆಗಳಲ್ಲಿನ ಪ್ರಶಿಕ್ಷಕರು ಕಡಿಮೆ ಕೆಲಸದ ಸಂಸ್ಕೃತಿಯ ಅಂಕಗಳು ವರದಿಯಾಗಿದೆ. ಇದರಿಂದ ಅವರ ಕೆಲಸದ ಸಂಸ್ಕೃತಿ ಕುರಿತು ಕಡಿಮೆ ಪರಿಣಾಮಕಾರತ್ವ ಅಂದರೆ ಸಕಾರಾತ್ಮಕ ಅಭಿಪ್ರಾಯವಿದೆ ಎಂದು ತೋರಿಸುತ್ತದೆ.

- ಮಧ್ಯಮ ಪರಿಣಾಮಕಾರಿ ನಾಯಕತ್ವದ ನಡವಳಿಕೆ: ಎರಡನೇ ಗುಂಪು, ಇದರಲ್ಲಿರುವ 273 ಪ್ರಶಿಕ್ಷಕರು 263.978 ಸರಾಸರಿ ಅಂಕಗಳನ್ನು ಹೊಂದಿದ್ದು, ಮಾನಕ ವಿಚಕನೆಯು 15.586 ಎಂದು ಕಂಡುಬಂದಿದೆ. ಮಧ್ಯಮ ಪರಿಣಾಮಕಾರಿ ನಾಯಕತ್ವದ ನಡವಳಿಕೆಯಲ್ಲಿ ಕಾರ್ಯನಿರ್ವಹಿಸುವ ಸಂಸ್ಥೆಗಳಲ್ಲಿನ ಪ್ರಶಿಕ್ಷಕರು ಕಡಿಮೆ ಪರಿಣಾಮಕಾರಿ ನೇತೃತ್ವದ ಗುಂಪಿಗೆ ಹೋಲಿಸಿದರೆ ಸ್ವಲ್ಪ ಉತ್ತಮ ಮಟ್ಟದಲ್ಲಿನ ಕೆಲಸದ ಸಂಸ್ಕೃತಿಯ ಅನುಭವಗಳನ್ನು ಹೊಂದಿದ್ದಾರೆ.

- ಹೆಚ್ಚು ಪರಿಣಾಮಕಾರಿ ನಾಯಕತ್ವದ ನಡವಳಿಕೆ: ಹೆಚ್ಚು ಪರಿಣಾಮಕಾರಿ ನಾಯಕತ್ವದ ನಡವಳಿಕೆಯ ಗುಂಪು 6 ಪ್ರಶಿಕ್ಷಕರನ್ನು ಒಳಗೊಂಡಿದ್ದು, ಅವರ ಸರಾಸರಿ ಅಂಕವು 273.833 ಮತ್ತು ಮಾನಕ ವಿಚಲನೆಯು 10.264 ಆಗಿದೆ. ಈ ಗುಂಪು ಸರಾಸರಿ ಅಂಕದಲ್ಲಿ ಅತ್ಯಧಿಕ ಮೌಲ್ಯವನ್ನು ತೋರಿಸಿರುವುದನ್ನು ಇದು ಸೂಚಿಸುತ್ತದೆ. ಹೆಚ್ಚು ಪರಿಣಾಮಕಾರಿ ನಾಯಕತ್ವದ ನಡವಳಿಕೆಯಲ್ಲಿ ಕಾರ್ಯನಿರ್ವಹಿಸುವ ಕಾಲೇಜಿನ ಪ್ರಶಿಕ್ಷಕರು ಅತ್ಯಂತ ಸಕಾರಾತ್ಮಕ ಕೆಲಸದ ಸಂಸ್ಕೃತಿಯನ್ನು ಹೊಂದಿರುವುದಾಗಿ ಕಂಡುಬಂದಿದೆ.

ಈ ವಿವರಣಾತ್ಮಕ ಸಂಖ್ಯಾಶಾಸ್ತ್ರಗಳು ನಾಯಕತ್ವ ನಡವಳಿಕೆಯ ಪರಿಣಾಮಕಾರಿತ್ವ ಬಿ.ಇಡಿ. ಪ್ರಶಿಕ್ಷಕರ ಕೆಲಸದ ಸಂಸ್ಕೃತಿಯನ್ನು ಪ್ರಭಾವಿತ ಗೊಳಿಸಿರುವುದನ್ನು ಸೂಚಿಸಿದ್ದು ಹೆಚ್ಚು ಪರಿಣಾಮಕಾರಿ ನಾಯಕತ್ವದ ನಡವಳಿಕೆಯನ್ನು ಹೊಂದಿರುವ ಸಂಸ್ಥೆಗಳು ಹೆಚ್ಚಿನ ಕೆಲಸದ ಸಂಸ್ಕೃತಿಯ ಅಂಕಗಳನ್ನು ಹೊಂದಿರುವುದು ತಿಳಿದುಬಂದಿದೆ.

ಕೋಷ್ಟಕ–2(ಅ): ನಾಯಕತ್ವ ನಡವಳಿಕೆಯ ಆಧಾರದ ಮೇಲೆ ಬಿ.ಇಡಿ. ಕಾಲೇಜು ಪ್ರಶಿಕ್ಷಕರ ಕೆಲಸದ ಸಂಸ್ಕೃತಿಯ ಅಂಕಗಳ ಕುರಿತು ಏಕಮುಖ ಪ್ರಸರಣಾ ವಿಶ್ಲೇಷಣೆಯ (One-way ANOVA) ಸಂಖ್ಯಾಶಾಸ್ತ್ರದ ಫಲಿತಾಂಶಗಳು.

| ವ್ಯತ್ಯಾಸದ ಮೂಲ (Source of Variance) | ಚೌಕಗಳ ಮೊತ್ತ (Sum of Squares) | ಸ್ವಾತಂತ್ರ್ಯದ ಮಟ್ಟ (df) | ಸರಾಸರಿ ಚದರ (Mean Square) | 'ಎಫ್' ಮೌಲ್ಯ ('F' Value) | ಮಹತ್ವದ ಮಟ್ಟ (Sig. Level) |
|---|---|---|---|---|---|
| ಗುಂಪುಗಳ ನಡುವೆ (Between Groups) | 3100.634 | 2 | 1550.317 | 6.54 | ** |
| ಗುಂಪುಗಳ ಒಳಗೆ (Within Groups) | 69970.386 | 295 | 237.188 | | |
| ಒಟ್ಟು (Total) | 73071.020 | 297 | | | |

** Indicates Significant at 0.01 level (N=298; df=295/2, Table Value @ 0.01=4.62)

ಕೋಷ್ಟಕ–2(ಅ) ನಲ್ಲಿ, ನಾಯಕತ್ವ ನಡವಳಿಕೆಯ ಪ್ರಭಾವದಿಂದ ಕೆಲಸದ ಸಂಸ್ಕೃತಿಯ ಅಂಕಗಳಲ್ಲಿ ಯಾವುದೇ ಪ್ರಮುಖ ಭೇದಗಳಿವೆಯೇ ಎಂದು ಪರಿಶೀಲಿಸಲು ಏಕಮುಖ ಪ್ರಸರಣಾ ವಿಶ್ಲೇಷಣೆಯ (One-way ANOVA) ಪರೀಕ್ಷೆಯ ಫಲಿತಾಂಶಗಳನ್ನು ಪ್ರಸ್ತುತಪಡಿಸಲಾಗಿದೆ. ಏಕ–ಮುಖ ಪ್ರಸರಣಾ ವಿಶ್ಲೇಷಣೆಯ ಮುಖ್ಯ ಫಲಿತಾಂಶಗಳನ್ನು ಈ ಕೆಳಕಂಡಂತೆ ನೀಡಿದೆ:

- ಗುಂಪುಗಳ ನಡುವಿನ ಚದುರಿಕೆ ಮೊತ್ತ 3100.634 ಮತ್ತು ಗುಂಪುಗಳ ನಡುವಿನ ಸರಾಸರಿ ಚದುರಿಕೆ 1550.317 ಆಗಿದೆ.
- ಗುಂಪುಗಳ ಒಳಗಿನ ಚದುರಿಕೆ ಮೊತ್ತ 69970.386, ಮತ್ತು ಗುಂಪುಗಳ ಒಳಗಿನ ಸರಾಸರಿ ಚದುರಿಕೆ 237.188 ಆಗಿದೆ.

ಗುಣಾಂಕದಿಂದ ದೊರೆತ 'ಎಫ್' ಮೌಲ್ಯ 6.54 ಎಂದು ದೊರೆತಿದ್ದು, ಇದು 0.01 ಮಟ್ಟದಲ್ಲಿ ಗಣಿತಾತ್ಮಕವಾಗಿ ಪ್ರಾಮುಖ್ಯತೆ ಹೊಂದಿದೆ ($p < 0.01$). 0.01 ಪ್ರಾಮುಖ್ಯತೆ ಮಟ್ಟದ ಮೌಲ್ಯ 4.62 ಆಗಿದ್ದು, ಪಡೆದ 'ಎಫ್' ಮೌಲ್ಯ (6.54) ಈ ಮಿತಿಯನ್ನು ಮೀರಿರುವುದನ್ನು ಈ ಕೋಷ್ಟಕವು ಸೂಚಿಸುತ್ತದೆ. ನಾಯಕತ್ವ ನಡವಳಿಕೆ ಆಧಾರಿತ ಕೆಲಸದ ಸಂಸ್ಕೃತಿಯ ಅಂಕಗಳಲ್ಲಿ ಪ್ರಮುಖ ವ್ಯತ್ಯಾಸಗಳಿವೆ. ನಾಯಕತ್ವ ನಡವಳಿಕೆಯು ಬಿ.ಇಡಿ. ಪ್ರಶಿಕ್ಷಕರು ತಮ್ಮ ಸಂಸ್ಥೆಗಳಲ್ಲಿ ಅನುಭವಿಸುವ ಕೆಲಸದ ಸಂಸ್ಕೃತಿಯನ್ನು ಉತ್ತಮವಾಗಿ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುವುದನ್ನು ಸೂಚಿಸಿದೆ.

ಕೋಷ್ಟಕ–2(ಆ): ನಾಯಕತ್ವ ನಡವಳಿಕೆಯ ಆಧಾರದ ಮೇಲೆ ಬಿ.ಇಡಿ. ಪ್ರಶಿಕ್ಷಕರ ಕೆಲಸದ ಸಂಸ್ಕೃತಿಯ ಅಂಕಗಳಿಗೆ ಸಂಬಂಧಿಸಿದಂತೆ ಪೋಸ್ಟ್–ಹಾಕ್ ಪರೀಕ್ಷೆಯ ಫಲಿತಾಂಶಗಳನ್ನು ಪ್ರಸ್ತುತಪಡಿಸುವ ಕೋಷ್ಟಕ

| ನಾಯಕತ್ವ ನಡವಳಿಕೆಯ ಮಟ್ಟಗಳು | | | ಸರಾಸರಿ ವ್ಯತ್ಯಾಸ (Mean Difference) | ನಿಗದಿತ ವ್ಯತ್ಯಾಸ (Critical Difference -CD) |
|---|---|---|---|---|
| ಕಡಿಮೆ | ಮಧ್ಯಮ | ಹೆಚ್ಚು | | |
| 252.263 | 263.978 | - | 11.715* | 9.010 |
| - | 263.978 | 273.833 | 9.855 | 15.672 |
| 252.263 | - | 273.833 | 21.570* | 17.783 |

*Significant at 0.05 level of confidence (Table 'n' value is 1.98)

ಕೋಷ್ಟಕ–2(ಆ) ನಲ್ಲಿ ಪೋಸ್ಟ್ ಹಾಕ್ ಪರೀಕ್ಷೆಯ ಫಲಿತಾಂಶಗಳನ್ನು ಪ್ರಸ್ತುತಪಡಿಸಲಾಗಿದೆ, ಇದು ವಿಶೇಷ ಗುಂಪುಗಳ ನಡುವೆ ನಾಯಕತ್ವ ನಡವಳಿಕೆ ಆಧಾರಿತ ವ್ಯತ್ಯಾಸಗಳನ್ನು ವಿಶ್ಲೇಷಿಸುತ್ತದೆ. ಪೋಸ್ಟ್ ಹಾಕ್ ವಿಶ್ಲೇಷಣೆಯು ಈ ಕೆಳಗಿನ ಪ್ರಮುಖ ವ್ಯತ್ಯಾಸಗಳನ್ನು ತೋರಿಸುತ್ತದೆ:

- ಕಡಿಮೆ ಪರಿಣಾಮಕಾರಿ ನಾಯಕತ್ವ ಮತ್ತು ಮಧ್ಯಮ ನಾಯಕತ್ವದ ನಡವಳಿಕೆಗಳು: ಈ ಎರಡು ಗುಂಪುಗಳ ನಡುವಿನ ಸರಾಸರಿ ವ್ಯತ್ಯಾಸ **11.715** ಆಗಿದ್ದು, ಇದು **0.05** ಮಟ್ಟದಲ್ಲಿ ಪ್ರಾಮುಖ್ಯತೆ ಹೊಂದಿದೆ ($p < 0.05$) ಮತ್ತು ನಿಗಧಿತ ವ್ಯತ್ಯಾಸವಾದ **9.010** ಮೌಲ್ಯಕ್ಕಿಂತ ಹೆಚ್ಚಿನದ್ದಾಗಿ ಕಂಡುಬಂದಿದೆ.

- ಮಧ್ಯಮ ಪರಿಣಾಮಕಾರಿ ನಾಯಕತ್ವ ಮತ್ತು ಹೆಚ್ಚು ಪರಿಣಾಮಕಾರಿ ನಾಯಕತ್ವ್: ಸರಾಸರಿ ವ್ಯತ್ಯಾಸ **9.855**, ಇದು **0.05** ಮಟ್ಟದಲ್ಲಿ ಪ್ರಾಮುಖ್ಯತೆ ಹೊಂದಿಲ್ಲದಿದ್ದು, ನಿಗಧಿತ ವ್ಯತ್ಯಾಸವಾದ **15.672** ಮೌಲ್ಯಕ್ಕಿಂತ ಕಡಿಮೆಯಾಗಿರುವುದು ಕಂಡುಬಂದಿದೆ.

- ಕಡಿಮೆ ಪರಿಣಾಮಕಾರಿ ನಾಯಕತ್ವ ಮತ್ತು ಹೆಚ್ಚು ಪರಿಣಾಮಕಾರಿ ನಾಯಕತ್ವ: ಸರಾಸರಿ ವ್ಯತ್ಯಾಸ **21.570**, ಇದು **0.05** ಮಟ್ಟದಲ್ಲಿ ಪ್ರಾಮುಖ್ಯತೆ ಹೊಂದಿದ್ದು, ನಿಗಧಿತ ವ್ಯತ್ಯಾಸ **17.783** ಮೌಲ್ಯಕ್ಕಿಂತ ಅಧಿಕವಾಗಿದೆ.

ಪೋಸ್ಟ್ ಹಾಕ್ ಪರೀಕ್ಷೆಯ ಫಲಿತಾಂಶಗಳನ್ನು ಮೇಲಿನ ಕೋಷ್ಟಕದಿಂದ ತಿಳಿಯುವುದಾದರೆ, ಹೆಚ್ಚು ಪರಿಣಾಮಕಾರಿ ನಾಯಕತ್ವ ನಡವಳಿಕೆಯಡಿ ಕಾರ್ಯನಿರ್ವಹಿಸುವ ಪ್ರಶಿಕ್ಷಕರು ಕಡಿಮೆ ಮತ್ತು ಮಧ್ಯಮ ನಾಯಕತ್ವ ನಡವಳಿಕೆಯಡಿಯಲ್ಲಿ ಕಾರ್ಯನಿರ್ವಹಿಸುವವರನ್ನು ಹೋಲಿಸಿದರೆ, ಹೆಚ್ಚಿನ ಮಟ್ಟ ಉತ್ತಮ ಕೆಲಸದ ಸಂಸ್ಕೃತಿಯ ಅಂಕಗಳನ್ನು ವರದಿ ಮಾಡಿದೆ. ಜೊತೆಗೆ, ಕಡಿಮೆ ಪರಿಣಾಮಕಾರಿ ನಾಯಕತ್ವದ ಗುಂಪು ಮತ್ತು ಹೆಚ್ಚು ಪರಿಣಾಮಕಾರಿ ನಾಯಕತ್ವ ನಡವಳಿಕೆಗಳ ಗುಂಪುಗಳ ನಡುವಿನ ಪ್ರಾಮುಖ್ಯ ವ್ಯತ್ಯಾಸವನ್ನು ಹತ್ತಿರವಾಗಿ ನೋಡಿದರೆ, ಇದು ನಾಯಕತ್ವ ನಡವಳಿಕೆಯ ಪರಿಣಾಮಕಾರಿತ್ವವನ್ನು ಇನ್ನಷ್ಟು ಪ್ರಾಧಾನ್ಯ ನೀಡುತ್ತದೆ.

ಒಟ್ಟಾರೆ, ಮೇಲಿನ ಏಕಮುಖ ಪ್ರಸರಣಾ ವಿಶ್ಲೇಷಣೆಯ (ANOVA) ಫಲಿತಾಂಶಗಳು ನಾಯಕತ್ವ ನಡವಳಿಕೆ ಬಿ.ಇಡಿ. ಪ್ರಶಿಕ್ಷಕರು ಅನುಭವಿಸುವ ಕೆಲಸದ ಸಂಸ್ಕೃತಿಯನ್ನು ಪ್ರಭಾವ ಬೀರುವುದರಲ್ಲಿ ಪ್ರಮುಖ ಪಾತ್ರ ವಹಿಸುವುದನ್ನು ತೋರಿಸುತ್ತವೆ. ಪೋಸ್ಟ್-ಹಾಕ್ ಪರೀಕ್ಷೆಯ ಫಲಿತಾಂಶಗಳು ಹೆಚ್ಚು ಪರಿಣಾಮಕಾರಿ ನಾಯಕತ್ವ ನಡವಳಿಕೆಗೊಳಪಡಿಸಿರುವ ಸಂಸ್ಥೆಗಳಲ್ಲಿ ಪ್ರಶಿಕ್ಷಕರು ಅತ್ಯಂತ ಒಳ್ಳೆಯ ಕೆಲಸದ ಸಂಸ್ಕೃತಿ ಅಂಕಗಳು ವರದಿಯಾಗಿರುವುದನ್ನು ಸೂಚಿಸುತ್ತದೆ. ಇದರಿಂದ ನಾಯಕತ್ವದ ನಡವಳಿಕೆಯ ಪ್ರಭಾವದಿಂದ ಕೆಲಸದ ಸಂಸ್ಕೃತಿಯನ್ನು ರೂಪಿಸಲು ಅತ್ಯಂತ ಮಹತ್ವಪೂರ್ಣ ಪಾತ್ರವನ್ನು ವಹಿಸುತ್ತದೆ. ಹೆಚ್ಚು ಪರಿಣಾಮಕಾರಿ ನಾಯಕತ್ವ ನಡವಳಿಕೆಯು ಉತ್ತಮ ಕೆಲಸದ ಸಂಸ್ಕೃತಿ ಅನುಭವವನ್ನೂ ನೀಡುತ್ತದೆ. ಇದು ಉದ್ಯೋಗ ತೃಪ್ತಿಯನ್ನು ಮತ್ತು ವೃತ್ತಿಪರ ಸಕಾಲಿಕತೆಗಳನ್ನು ಹೆಚ್ಚಿಸುತ್ತದೆ. ಈ ಅಂಶವನ್ನು ಸಂಕ್ಷಿಪ್ತವಾಗಿ ನಕ್ಷೆ–1 ರಲ್ಲಿ ನೀಡಲಾಗಿದೆ.




**ನಕ್ಷೆ–1:** ಬಿ.ಇಡಿ. ಸಂಸ್ಥೆಗಳ ಕಾಲೇಜು ಪ್ರಾಂಶುಪಾಲರ ನಾಯಕತ್ವ ನಡವಳಿಕೆಯ ವಿಭಿನ್ನ ಪರಿಣಾಮಕಾರಿತ್ವ ಮಟ್ಟಗಳಡಿ ಕಾರ್ಯನಿರ್ವಹಿಸುತ್ತಿರುವ ಬಿ.ಇಡಿ. ಪ್ರಶಿಕ್ಷಕರ ಕೆಲಸದ ಸಂಸ್ಕೃತಿಯ ನಡುವಿನ ವ್ಯತ್ಯಾಸವನ್ನು ತೋರಿಸುವ ನಕ್ಷೆ.

**8.ಸಂಶೋಧನೆಯಿಂದ ಹೊರಬಂಧ ಫಲಿತಾಂಶಗಳು**

1. ಕೆಲಸದ ಸಂಸ್ಕೃತಿ ಮತ್ತು ಕಾಲೇಜು ಪ್ರಾಂಶುಪಾಲರ ನಾಯಕತ್ವ ನಡವಳಿಕೆಗೆ ಮಹತ್ವಪೂರ್ಣವಾದ ಸಕಾರಾತ್ಮಕ ಸಂಬಂಧವಿದೆ.
2. ಬಿ.ಇಡಿ. ಸಂಸ್ಥೆಗಳಲ್ಲಿನ ಕಾಲೇಜು ಪ್ರಾಂಶುಪಾಲರ ನಾಯಕತ್ವ ನಡವಳಿಕೆಯ ಪರಿಣಾಮಕಾರಿತ್ವ ಮಟ್ಟದ ಆಧಾರದ ಮೇಲೆ ಬಿ.ಇಡಿ. ಪ್ರಶಿಕ್ಷಕರ ಕೆಲಸದ ಸಂಸ್ಕೃತಿಯಲ್ಲಿ ಮಹತ್ವಪೂರ್ಣವಾದ ವ್ಯತ್ಯಾಸವಿದೆ. ಹೆಚ್ಚು ಪರಿಣಾಮಕಾರಿ ನಾಯಕತ್ವದ ಅಡಿಯಲ್ಲಿ ಕಾರ್ಯನಿರ್ವಹಿಸುವ ಪ್ರಶಿಕ್ಷಕರಿಗೆ ಉತ್ತಮ ಕೆಲಸದ ಸಂಸ್ಕೃತಿ ಇದೆ ಎಂದು ಕಂಡುಬಂದಿದೆ.

**9.ಉಪಸಂಹಾರ**

ಮೇಲಿನ ಫಲಿತಾಂಶಗಳ ಆಧಾರದ ಮೇಲೆ, ಬಿ.ಇಡಿ. ಕಾಲೇಜಿನ ಪ್ರಶಿಕ್ಷಕರ ಕೆಲಸ ಸಂಸ್ಕೃತಿಯನ್ನು ರೂಪಿಸುವಲ್ಲಿ ಪ್ರಾಂಶುಪಾಲರ ನಾಯಕತ್ವ ನಡವಳಿಕೆಯು ಮಹತ್ವಪೂರ್ಣವಾದ ಪಾತ್ರವಹಿಸುತ್ತದೆ ಎಂಬುದನ್ನು ನಿರ್ಣಯಿಸಲಾಗಿದೆ. ಸಕಾರಾತ್ಮಕ ಮತ್ತು ಪರಿಣಾಮಕಾರಿ ನಾಯಕತ್ವದ ದೃಷ್ಟಿಕೋನವು ಸಂಪೂರ್ಣ ಸಂಸ್ಥೆಯ ವಾತಾವರಣವನ್ನು ಮಹತ್ತರವಾಗಿ ಸುಧಾರಿಸಿ, ಪ್ರಶಿಕ್ಷಕರಿಗೆ ಉತ್ತಮ ವೃತ್ತಿಪರ ಅನುಭವಗಳನ್ನು ಉತ್ತೇಜಿಸುತ್ತದೆ.

**10.ಶೈಕ್ಷಣಿಕ ನಿಹಿತಾರ್ಥಗಳು**

ಬಿ.ಇಡಿ. ಕಾಲೇಜುಗಳ ಕೆಲಸದ ಸಂಸ್ಕೃತಿ ಪ್ರಸ್ತುತವಾಗಿ ಸಂಸ್ಥೆಯಲ್ಲಿರುವ ಮೌಲ್ಯಗಳು, ಮನೋಭಾವಗಳು ಮತ್ತು ಅಂಶಗಳನ್ನು ಪ್ರತಿಬಿಂಬಿಸುತ್ತದೆ. ಅಧ್ಯಯನ ಫಲಿತಾಂಶಗಳು ಉತ್ತಮ ನಾಯಕತ್ವದ ನಡವಳಿಕೆ ಮತ್ತು ಉತ್ತಮ ವೇತನವು ಉತ್ತಮ ಕೆಲಸದ ಸಂಸ್ಕೃತಿಗೆ ಕಾರಣವಾಗುತ್ತವೆ ಎಂದು ಸೂಚಿಸುತ್ತವೆ. ಶಿಕ್ಷಣ ಸಂಸ್ಥೆಗಳು ಸಹಕಾರ, ಪರಸ್ಪರ ಗೌರವ, ಗುರುತಿಸುವಿಕೆ ಮತ್ತು ನಿರಂತರ ಕಲಿಕೆಯ ಸಂಸ್ಕೃತಿಯನ್ನು ನಿರ್ಮಿಸಲು ಪ್ರಯತ್ನಿಸಬೇಕು. ನಿಯಮಿತ ಅಧ್ಯಾಪಕರ ಸಭೆಗಳು, ಗುರುತಿಸುವಿಕೆ ಕಾರ್ಯಕ್ರಮಗಳು, ಸಹಕಾರ ಯೋಜನೆಗಳು ಮತ್ತು ಸಹಪಾಠ ಕಲಿಕೆಯ ಅವಧಿಗಳು ಕೆಲಸದ ಸಂಸ್ಕೃತಿಯನ್ನು ಉತ್ತಮಗೊಳಿಸಬಹುದು. ಶಕ್ತಿಯುತ ಕೆಲಸದ ಸಂಸ್ಕೃತಿಯು ಬದ್ಧತೆಯನ್ನು ಉತ್ತೇಜಿಸಿ, ಬದಲಾವಣೆಯ ಪ್ರಮಾಣವನ್ನು ಕಡಿಮೆ ಮಾಡಿ, ಸಂಸ್ಥೆಯ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ, ಅಂತಿಮವಾಗಿ ಶಿಕ್ಷಕ ತರಬೇತಿದಾರರಿಗೆ ಲಾಭವಾಗುತ್ತದೆ.

**11.ಮುಂದಿನ ಸಂಶೋಧನೆಗೆ ಶಿಫಾರಸುಗಳು**

1. ಡಿಜಿಟಲ್ ನಾಯಕತ್ವ ಅಥವಾ ರೂಪಾಂತರಾತ್ಮಕ (Transformational) ನಾಯಕತ್ವ ಶೈಲಿಗಳ ಪರಿಣಾಮವನ್ನು ಬಿ.ಇಡಿ. ಕಾಲೇಜುಗಳಲ್ಲಿ ಪರಿಶೀಲಿಸಬಹುದು.
2. ನಾಯಕತ್ವದ ಸವಾಲುಗಳು ಮತ್ತು ಉತ್ತಮ ಅಭ್ಯಾಸಗಳನ್ನು ಒಳಗೊಂಡಂತೆ ಆಳವಾದ ಅರಿವಿಗಾಗಿ ಗುಣಾತ್ಮಕ ಅಧ್ಯಯನಗಳನ್ನು ನಡೆಸಬಹುದು.

## ಪರಾಮರ್ಶನ ಗ್ರಂಥಗಳು

[1]. Al-Safran, Eissa; Brown, David and Wiseman, Alexander (2002), The Effect of Principal's Leadership Style on School Environment and Outcome, *Research in Higher Education Journal*, 1-19.
[2]. Dewey, John, *Dictionary of Education*, Philosophical Library, New York.
[3]. Fu C, Zhao Z, Wang H, Ouyang M, Mao X, Cai X and Tan X (2022), How Perceived School Culture relates to Work Engagement among Primary and Secondary School Teachers? Roles of Affective Empathy and Job Tenure, *Frontiers in Psychology*, 13. 1-15.
[4]. Ghanney, Robert Andrews; Antwi, Theresa and Ali, Humu (2017), School Culture and Teacher Job Performance: A Comparative Analysis of the Perception of Teaching Staff in Private and Public basic Schools in Ga South Municipality, *British Journal of Education*, *5*(9), 108-121.
[5]. Good, C.V. (1945), *Dictionary of Education*, New York, Toronto, London, Mc Graw Hill Book Co.
[6]. Kalman, M. and Balkar, B. (2018). Shifting Teachers' Perceptions of School Culture in Turkey: A Mixed Methods Study, *FIRE: Forum for International Research in Education*, *4*(2), 39-65.
[7]. Kashif, Dr. Mahvish Fatima; Shaheen, Dr. Faiza and Mannan, Tahira (2021), Effect of School Culture on Job Performance of Secondary School Teachers, *Pakistan Journal of Humanities & Social Sciences Research*, 04(02), 15-21.

[8]. Khaola, P.P. and Oni, F.A. (2020). The Influence of School Principals' Leadership Behaviour and Act of Fairness on Innovative Work Behaviours Amongst Teachers, SA Journal of Human Resource Management, 18(0), a1417.

[9]. Kothari C.R. (2001), *Research Methodology Methods and Techniques*, Second edition.

[10]. Lutfah, Asma; Hariyati, Nunuk; and Handayaningrum, Warih (2019), Improved Teacher Performance through Work Culture and Environment, *International Journal for Educational and Vocational Studies*, *1*(8), 859-863

[11]. Mangal S.K. (2017), *Statistics in Psychology and Education*, Delhi: PHI Learning Private Limited.

[12]. Mohamed, Raqia Ahmed (2022), The Influence of School Culture on Teachers' Job Satisfaction at some selected Secondary Schools in Mogadishu, Somalia, *EPRA International Journal of Multidisciplinary Research* (IJMR), *8*(4), 1-9.

[13]. Nageswari R. and Subathra C. (2020), Principals' Leadership Behaviour and Administrative Experience, *Palarch's Journal of Archaeology of Egypt/Egyptology PJAEE, 17*(6): 5712-5722.

[14]. Rehman, Latif Ur; Shah, Liaquat Hussain and Malik, Khuda Bakhsh (2019), Leadership Behavior of Principals and Attitudes of Teachers towards Academic Environment in Private Schools, *Global Social Sciences Review (GSSR), IV*(IV): 165-170.

[15]. Sharma R.A. (2005), *Elementary Statistics in Education and Psychology,* Meerut: Vinay Rakheja Publication.

[16]. Veletic, Jelena; Price, Heather E. and Olsen, Rolf Vegar (May, 2023), Teachers' and Principals' Perceptions of School Climate: The Role of Principals' Leadership Style in Organizational Quality, *Springer: Educational Assessment, Evaluation and Accountability*. https://doi.org/10.1007/s11092-023-09413-6

[17]. Wal, J.C. (2000), *Essential of Education Psychology*, New Delhi: Vikash Publishing House.